**All India Radio : Bangalore**
**National Bulletin In Kannada**
**23.05.2017/07.35 hrs**

ಆಕಾಶವಾಣಿ: ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

*********ಮುಕ್ತಾಯ *********

ಮುಖ್ಯಾಂಶಗಳು

1. ಇತರ ರಾಷ್ಟ್ರಗಳೊಂದಿಗೆ ಪಾಲುದಾರಿಕೆಯನ್ನು ಒತ್ತಾಯಪೂರ್ವಕವಾಗಿ ಹೇರುವುದರಲ್ಲಿ ಭಾರತಕ್ಕೆ ವಿಶ್ವಾಸವಿಲ್ಲ : ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ

2. ಎರಡು ದಿನಗಳ 'ಸ್ಟಾರ್ಟ್ ಅಪ್ ಇಂಡಿಯಾ ಶೃಂಗ' : ಅಭುದಾಬಿಯಲ್ಲಿ ಇಂದು ಆರಂಭ

3. ಜುಲೈ 1 ರಿಂದ ಜಿಎಸ್‌ಟಿ ಅನುಷ್ಠಾನಗೊಳ್ಳುವವರೆಗೂ ಬೆಲೆ ಏರಿಕೆ ಮಾಡದಂತೆ ಕೈಗಾರಿಕೆಗಳಿಗೆ ಸರ್ಕಾರದ ಸೂಚನೆ

4. ಬ್ರಿಟನ್‌ನ ಮ್ಯಾಂಚೆಸ್ಟರ್ ಅರೇನಾದಲ್ಲಿ ಸ್ಫೋಟ : 19 ಸಾವು, 50 ಜನರಿಗೆ ಗಾಯ

*********

ಇತರ ದೇಶಗಳೊಂದಿಗೆ ಪಾಲುದಾರಿಕೆ ಒತ್ತಡ ಹೇರುವುದರಲ್ಲಿ ಭಾರತಕ್ಕೆ ನಂಬಿಕೆ ಇಲ್ಲ, ಬದಲಿಗೆ ಇತರ ರಾಷ್ಟ್ರಗಳು ಮೈತ್ರಿಗೆ ಕರೆ ನೀಡಲು ಭಾರತ ಅವಕಾಶ ನೀಡುತ್ತದೆ ಎಂದು ಆಫ್ರಿಕಾ ರಾಷ್ಟ್ರಗಳೊಂದಿಗೆ ಬಾಂಧವ್ಯ ಬಲವರ್ಧನೆ ಸಂಬಂಧ ನಿನ್ನೆ ಮಾತನಾಡಿದ ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಹೇಳಿದ್ದಾರೆ. 52ನೇ ಆಫ್ರಿಕಾ ಅಭಿವೃದ್ಧಿ ಬ್ಯಾಂಕ್ ಸಂಘ – ಎಎಫ್‌ಡಿಬಿಯ ವಾರ್ಷಿಕ ಸಭೆಯ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು. ಭಾರತ – ಆಫ್ರಿಕಾ ಒಗ್ಗೂಡಿ ವಿಶ್ವದ ಭವಿಷ್ಯ ರೂಪಿಸಲು ಸಾಧ್ಯ ಎಂದು ಜೇಟ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಆಫ್ರಿಕಾದ ರಾಷ್ಟ್ರಗಳಲ್ಲಿ ಚೀನಾ ಹಾಗೂ ಭಾರತದ ಹೂಡಿಕೆಯ ಹೋಲಿಕೆ ನೀಡಿ, ಆಫ್ರಿಕಾದ ಉದಯೋನ್ಮುಖ ಬಂಡವಾಳದಾರರಲ್ಲಿ ಭಾರತ ಪ್ರಮುಖವಾಗಿದೆ ಎಂದರು. ಆಫ್ರಿಕಾದ ಯೋಜನೆಗಳಲ್ಲಿ 2003 ರಿಂದ 2008ರ ಅವಧಿಯಲ್ಲಿ ಶೇಕಡ 3.3 ರಷ್ಟಿದ್ದ ಭಾರತದ ಹೂಡಿಕೆ, 2009 ರಿಂದ 2015ರ ಅವಧಿಯಲ್ಲಿ ಶೇಕಡ 6.1ಕ್ಕೆ ಏರಿತ್ತು. ಆದರೆ ಅದೇ ಅವಧಿಯಲ್ಲಿ ಚೀನಾದ ಪಾಲು ಶೇಕಡ 4.9 ರಿಂದ ಶೇಕಡ 3.3ಕ್ಕೆ ಇಳಿದಿದೆ ಎಂದು ತಿಳಿಸಿದರು.

*********

ಅರಬ್ ಒಕ್ಕೂಟದ ಅಭುಧಾಬಿಯಲ್ಲಿ ಎರಡು ದಿನಗಳ 'ಸ್ಟಾರ್ಟ್ ಅಪ್ ಇಂಡಿಯಾ ಶೃಂಗ" ಇಂದು ಆರಂಭವಾಗಲಿದೆ. ದುಬೈನ ದೂತಾವಾಸ ಕಚೇರಿ ಆಯೋಜಿಸಿರುವ ಮೊದಲ ಸ್ಟಾರ್ಟ್ ಅಪ್ ಶೃಂಗಸಭೆ ಇದಾಗಿದೆ. ಉದ್ಯಮಶೀಲತೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ದುಬೈನ ಸ್ವಯಂಸೇವಾ ಸಂಸ್ಥೆ ಇಂಡಿಯನ್ ಸಾಫ್ಟ್‌ವೇರ್ ಪ್ರಾಡಕ್ಟ್ ಇಂಡಸ್ಟ್ರಿ ರೌಂಡ್ ಟೇಬಲ್ ಸಹಯೋಗದಲ್ಲಿ ಶೃಂಗಸಭೆ ಆಯೋಜಿಸಲಾಗಿದೆ.

ಭಾರತ ಮತ್ತು ಯುಎಇ ನಡುವೆ ನವೋದ್ಯಮಗಳಲ್ಲಿ ಹೆಚ್ಚಿನ ಸಹಕಾರ, ವಿಚಾರ ವಿನಿಮಯ, ಶಿಕ್ಷಣ ತಜ್ಞರು, ಬಂಡವಾಳ ಹೂಡಿಕೆದಾರರು ಹಾಗೂ ಕೈಗಾರಿಕೋದ್ಯಮಿಗಳೊಂದಿಗೆ ಸಂಹನ ನಡೆಸಲು ಇದು ವೇದಿಕೆ ಒದಗಿಸುವ ಗುರಿ ಹೊಂದಿದೆ.

'ಸ್ಟಾರ್ಟ್ ಅಪ್ ಇಂಡಿಯಾ' ಭಾರತೀಯ ಉದ್ಯಮಿಗಳನ್ನು ಪ್ರೋತ್ಸಾಹಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ಆರಂಭಿಸಿರುವ ಪ್ರಮುಖ ಯೋಜನೆಯಾಗಿದೆ ಎಂದು ಯುಎಇಯ ಭಾರತದ ರಾಯಭಾರಿ ನವ್‌ದೀಪ್ ಸೂರಿ ಒತ್ತಿ ಹೇಳಿದ್ದಾರೆ.

*********

ಕೇಂದ್ರದ ಎನ್‌ಡಿಎ ಸರ್ಕಾರ ಮೂರು ವರ್ಷಗಳ ಆಡಳಿತ ಪೂರೈಸುತ್ತಿರುವ ಸಂದರ್ಭದಲ್ಲಿ ಅಸ್ಸಾಂ ರಾಜ್ಯದಿಂದ ಇದೇ 26 ರಂದು ರಾಷ್ಟ್ರದ ಜನತೆಯನ್ನುದ್ದೇಶಿಸಿ ಮಾತನಾಡಲು ಪ್ರಧಾನಮಂತ್ರಿ ನರೇಂದ್ರ ಮೋದಿ ಸಮ್ಮತಿಸಿದ್ದಾರೆ. ಪ್ರಧಾನಿ ಅವರ ಈ ನಿರ್ಧಾರಕ್ಕೆ ಅಸ್ಸಾಂ ಸಂಪುಟ ವಂದಿಸಿದೆ. ಗುವಹಾಟಿಯಲ್ಲಿ ಕಳೆದ ರಾತ್ರಿ ಮುಖ್ಯಮಂತ್ರಿ ಸರ್ಬಾನಂದ್ ಸೋನೋವಾಲ್ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಸಭೆ ನಡೆಯಿತು. 5ನೇ ಅಸ್ಸಾಂ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಸಹ ಸಂಪುಟ ಅಂಗೀಕರಿಸಿತು.

ಮೂರು ವರ್ಷಗಳ ಆಡಳಿತ ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ ಅಸ್ಸಾಂನಲ್ಲಿ ನಡೆಯಲಿರುವ ಸಮಾರಂಭವನ್ನು ಯಶಸ್ವಿಯಾಗಿಸಲು ಭರದ ಸಿದ್ಧತೆ ನಡೆದಿದೆ.

ಆ ದಿನದಂದು ದೇಶದ ಅತ್ಯಂತ ಉದ್ದದ ಸೇತುವೆ ದೋಲಾ ಸಾದಿಯಾ ಅನ್ನು ಉದ್ಘಾಟಿಸಲಿದ್ದಾರೆ ಹಾಗೂ ಧೇಮಾಜಿ ಜಿಲ್ಲೆಯ ಕೃಷಿ ಸಂಸ್ಥೆಗೆ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ರಂಗಿಯಾದಲ್ಲಿ ನಿರ್ಮಾಣವಾಗಲಿರುವ ಎಐಐಎಮ್‌ಎಸ್ ಗೂ ಗವಹಾತಿಯಲ್ಲಿ ಪ್ರಧಾನಿ ಶಿಲಾನ್ಯಾಸ ನೆರವೇರಿಸಲಿದ್ದಾರೆ.

*********

ಬ್ಯಾಂಕ್‌ಗಳಲ್ಲಿನ ಎಂಟು ಲಕ್ಷ ಕೋಟಿಗೂ ಅಧಿಕ ಮರುಪಾವತಿಯಾಗದ ಸಾಲವನ್ನು ಸಮರ್ಪಕವಾಗಿ ನಿರ್ವಹಿಸಲು, ಸರ್ಕಾರ ಭಾರತೀಯ ರಿಸರ್ವ್ ಬ್ಯಾಂಕ್ – ಆರ್‌ಬಿಐ ಗೆ ಹೆಚ್ಚುವರಿ ಅಧಿಕಾರ ನೀಡಿದ್ದು, ಮೇಲ್ವಿಚಾರಣಾ ಸಮಿತಿಯನ್ನು ಪುನಾರಚಿಸಲು ಆರ್‌ಬಿಐ ನಿರ್ಧರಿಸಿದೆ.

ಪ್ರಸ್ತುತ ಮೇಲ್ವಿಚಾರಣಾ ಸಮಿತಿಯಲ್ಲಿರುವ ಸದಸ್ಯರು ಪುನಾರಚಿತ ಸಮಿತಿಯಲ್ಲಿ ಮುಂದುವರಿಯಲಿದ್ದಾರೆ, ಸಮಿತಿಗೆ ಸೇರ್ಪಡೆಯಾಗಲಿರುವ ಸದಸ್ಯರ ಹೆಸರುಗಳನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಆರ್‌ಬಿಐ ನಿನ್ನೆ ಮುಂಬೈನಲ್ಲಿ ಹೇಳಿಕೆ ನೀಡಿದೆ.

ಅಪ್ರಯೋಜಕ ಆಸ್ತಿ – ಎನ್‌ಪಿಎ ವಿಷಯವಾಗಿ ಸಲಹೆ ನೀಡಲು ಸ್ವತಂತ್ರ ಆಡಳಿತ ಮಂಡಳಿ ಸದಸ್ಯರನ್ನೊಳಗೊಂಡ ಸಮಿತಿಯನ್ನೂ ರಚಿಸಲಾಗುವುದು ಬ್ಯಾಂಕ್‌ಗಳಲ್ಲಿನ ಸಾಲದ ಪ್ರಸ್ತುತ ಸ್ಥಿತಿಗತಿಯ ಬಗ್ಗೆ ಈಗಾಗಲೇ ಮಾಹಿತಿ ಪಡೆದಿದ್ದು, ಸಾಲ ಮರುಪಾವತಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಋಣ ಮಾಪನ ಸಂಸ್ಥೆಗಳ ಪಾತ್ರವನ್ನೂ ಪರಿಗಣಿಸಲಿದೆ ಎಂದು ಆರ್‌ಬಿಐ ತಿಳಿಸಿದೆ. ಎನ್‌ಪಿಎ ಪರಿಹಾರಕ್ಕೆ ಸುಮಾರು 50 ಪ್ರಮುಖ ಪ್ರಕರಣಗಳನ್ನು ಆರ್‌ಬಿಐ ಈಗಾಗಲೇ ಗುರುತಿಸಿದೆ ಎಂದು ಮೂಲಗಳು ತಿಳಿಸಿವೆ.

*********

ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ರಾಷ್ಟ್ರೀಯ ಇ–ಆಡಳಿತ ವಿಭಾಗ, ಪಂಜಾಬ್ ಸರ್ಕಾರ ಹಾಗೂ ಹೈದರಾಬಾದ್‌ನ ಚತುರ ಆಡಳಿತದ ರಾಷ್ಟ್ರೀಯ ಸಂಸ್ಥೆ ಸಹಯೋಗದಲ್ಲಿ ಚಂಡೀಗಢದಲ್ಲಿ ‘ ಸರ್ಕಾರದಲ್ಲಿ ವಿದ್ಯುನ್ಮಾನ ಪಾವತಿ ಮತ್ತು ಸ್ವೀಕೃತಿ’ ಕುರಿತು ನಿನ್ನೆ ಒಂದು ದಿನದ ಪ್ರಾದೇಶಿಕ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಉತ್ತರಾಖಂಡ್, ಉತ್ತರಪ್ರದೇಶ ಹಾಗೂ ಚಂಡೀಗಢ ರಾಜ್ಯಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದವು.

ಡಿಜಿಟಲ್ ವಹಿವಾಟು ಹಾಗೂ ಸೈಬರ್ ಭದ್ರತೆ ಬಗ್ಗೆ ಗೃಹ ವ್ಯವಹಾರಗಳ ಸಚಿವ ಡಾ.ನಿರ್ಮಲ್‌ಜೀತ್ ಸಿಂಗ್ ಕಲ್ಸೆ ಒತ್ತಿ ಹೇಳಿದರು.

*********

ಜುಲೈ 1 ರಿಂದ ಸರಕು ಮತ್ತು ಸೇವಾ ತೆರಿಗೆ – ಜಿಎಸ್‌ಟಿ ಜಾರಿಗೊಳ್ಳುವವರೆಗೂ ಬೆಲೆ ಏರಿಕೆ ಮಾಡದಂತೆ ಕೈಗಾರಿಕೆಗಳಿಗೆ ಸರ್ಕಾರ ಸೂಚಿಸಿದೆ. ಈ ರೀತಿಯ ಬೆಲೆ ಏರಿಕೆ ಸಂಬಂಧ ನಿರ್ದಿಷ್ಟ ಪ್ರಾಧಿಕಾರಗಳ ಲೆಕ್ಕಪತ್ರಗಳ ವಿಚಾರಣೆ ನಡೆಸಬಹುದು ಎಂದು ಸರ್ಕಾರ ಹೇಳಿದೆ.

ತೆರಿಗೆ ಕಡಿತದ ಲಾಭವನ್ನು ಗ್ರಾಹಕರಿಗೆ ನೀಡುವುದನ್ನು ಖಾತ್ರಿಪಡಿಸಿಕೊಳ್ಳಲು ಹಾಗೂ ಬೃಹತ್ ಕಾರ್ಪೋರೇಟ್ ಸಂಸ್ಥೆಗಳು ಅನ್ಯಾಯದ ಲಾಭದಾಯಕ ವಹಿವಾಟು ನಡೆಸದಂತೆ ಆದಾಯ ತೆರಿಗೆ ಇಲಾಖೆ ನಿಗಾವಹಿಸಲಿದೆ ಎಂದು ಕಂದಾಯ ಕಾರ್ಯದರ್ಶಿ ಹಸ್ಮುಖ್ ಅಧಿಯಾ ನಿನ್ನೆ ಸುದ್ದಿವಾಹಿನಿಯೊಂದರಲ್ಲಿ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

ಕಂಪೆನಿಗಳು ತೆರಿಗೆ ಕಡಿತದ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸುವುದನ್ನು ಖಚಿತಪಡಿಸಿಕೊಳ್ಳಲು ಆ್ಯಂಟಿ – ಪ್ರಾಫಿಟೀರಿಂಗ್ ಪ್ರಾಧಿಕಾರ ರಚಿಸಲು ಸಹ ಸರಕು ಮತ್ತು ಸೇವಾ ತೆರಿಗೆ ಮಸೂದೆಯಲ್ಲಿ ಅವಕಾಶವಿದೆ. ಜಿಎಸ್‌ಟಿ ಮಂಡಳಿ ಶೇಕಡ 5, 12, 18 ಹಾಗೂ 28ರ ತೆರಿಗೆ ವ್ಯಾಪ್ತಿಗೆ ಸುಮಾರು 1 ಸಾವಿರದ 200 ಸರಕು ಹಾಗೂ 500 ಸೇವೆಗಳನ್ನು ಕಳೆದ ವಾರ ಸೇರ್ಪಡೆಗೊಳಿಸಿತು.

*********

ಉತ್ತರಾಖಂಡದ ಗುಡ್ಡಗಾಡು ಪ್ರದೇಶಗಳಲ್ಲಿ ಮುಂದಿನ 24 ಗಂಟೆಗಳಲ್ಲಿ ಆಮ್ಲಮಳೆಯಾಗಬಹುದು ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಸಾವಿರಾರು ಯಾತ್ರಾರ್ಥಿಗಳು 'ಚಾರ್‌ಧಾಮ್ ಯಾತ್ರೆ' ಕೈಗೊಂಡಿದ್ದು, ಕೇದಾರನಾಥ, ಬದರಿನಾಥ, ಯಮುನೋತ್ರಿ ಮತ್ತು ಗಂಗೋತ್ರಿ ನಾಲ್ಕು ಪವಿತ್ರ ಕ್ಷೇತ್ರಗಳಲ್ಲಿ ಭಾರಿ ಮಳೆ ಮುನ್ಸೂಚನೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಆಮ್ಲಮಳೆಯ ಮುನ್ನೆಚ್ಚರಿಕೆ ಮಹತ್ವ ಪಡೆದಿದೆ.

ಉತ್ತರಕಾಶಿ, ಚಮೋಲಿ, ರುದ್ರಪ್ರಯಾಗ, ನೈನಿತಾಲ್ ಮತ್ತು ಪಿತೋರ್‌ಘರ್ ಜಿಲ್ಲೆಗಳಲ್ಲಿ ಭಾರೀ ಮಳೆಯಾಗಲಿದೆ ಎಂದು ನಿನ್ನೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

*********

ಬ್ರಿಟನ್‌ನ ಮ್ಯಾಂಚೆಸ್ಟರ್‌ನಲ್ಲಿ ಸಂಭವಿಸಿದ ಸ್ಫೋಟದಲ್ಲಿ 19 ಮಂದಿ ಮೃತಪಟ್ಟಿದ್ದು ಸುಮಾರು 50 ಜನರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಅಮೆರಿಕದ ಗಾಯಕ ಅರಿಯಾನಾ ಗ್ರಾಂಡೆ ಅವರ ಪಾಪ್ ಸಂಗೀತ ಕಾರ್ಯಕ್ರಮದ ನಂತರ ಭೀಕರ ಸದ್ದು ಕೇಳಿಸಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಟಿಕೆಟ್ ನೀಡುವ ಸ್ಥಳದ ಬಳಿ ಎರಡು ಬಾರಿ ಸ್ಫೋಟಕ ಸದ್ದು ಕೇಳಿ ಬಂದಿದೆ. ಸ್ಫೋಟದ ಕಾರಣ ತಿಳಿದುಬಂದಿಲ್ಲ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಂಗೀತ ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳಕ್ಕೆ ಸಮೀಪದ ಮ್ಯಾಂಚೆಸ್ಟಾ ವಿಕ್ಟೋರಿಯಾ ನಿಲ್ದಾಣ ಮುಚ್ಚಲಾಗಿದ್ದು, ಎಲ್ಲ ರೈಲುಗಳ ಸಂಚಾರವನ್ನು ರದ್ದುಪಡಿಸಲಾಗಿದೆ.

ಜನರು ಘಟನಾ ಸ್ಥಳದಿಂದ ದೂರ ಇರುವಂತೆ ಪೊಲೀಸರು ಟ್ವೀಟ್ ಮೂಲಕ ಕೋರಿದ್ದಾರೆ. ಸ್ಫೋಟದ ನಂತರದ ತಳಮಳವನ್ನು ಪ್ರತ್ಯಕ್ಷದರ್ಶಿಗಳು ವಿವರಿಸಿದ್ದಾರೆ.

*********

ಉತ್ತರ ಕೊರಿಯಾದ ಇತ್ತೀಚಿನ ಕ್ಷಿಪಣಿ ಪರೀಕ್ಷೆಯನ್ನು ವಿಶ್ವಸಂಸ್ಥೆ ಭದ್ರತಾ ಮಂಡಳಿ ತೀವ್ರವಾಗಿ ಖಂಡಿಸಿದೆ ಹಾಗೂ ಎಲ್ಲ ರಾಷ್ಟ್ರಗಳು ಪ್ಯೋಗ್ಯಾನ್‌ಗೆ ನಿರ್ಬಂಧ ಬಿಗಿಗೊಳಿಸುವಂತೆ ತಿಳಿಸಿದೆ.

ಚೀನಾ ಬೆಂಬಲಿತ ಪ್ಯೋಗ್ಯಾನ್‌ನ ಮೈತ್ರಿಯ ಅನಾಮಿಕ ಹೇಳಿಕೆ ಸಂಬಂಧ ಕಳೆದ ವರ್ಷ ಅಳವಡಿಸಿಕೊಂಡ ಬಿಗಿ ಕ್ರಮಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಗಳನ್ನು ದ್ವಿಗುಣಗೊಳಿಸುವಂತೆ ಭದ್ರತಾ ಮಂಡಳಿ ಸೂಚನೆ ನೀಡಿದೆ.

ಉತ್ತರ ಕೊರಿಯಾದ ಅತಿರೇಕದ ಅಸ್ಥಿರ ನಡವಳಿಕೆಯನ್ನು ನಿಲ್ಲಿಸಿ, ಪಥ ಬದಲಿಸಲು ಉತ್ತರ ಕೊರಿಯಾಗೆ ನಿರ್ಬಂಧ ಹೇರುವುದು ಸೇರಿದಂತೆ ಮಹತ್ವದ ಕ್ರಮಗಳನ್ನು ಕೈಗೊಳ್ಳಲು ಮಂಡಳಿ ಸಮ್ಮತಿಸಿದೆ.

ಜಪಾನ್, ದಕ್ಷಿಣ ಕೊರಿಯಾ ಹಾಗೂ ಅಮೆರಿಕ ದೇಶಗಳ ಕೋರಿಕೆ ಮೇರೆಗೆ ಉತ್ತರ ಕೊರಿಯಾದ ಇತ್ತೀಚಿನ ಕ್ಷಿಪಣಿ ಪರೀಕ್ಷೆ ಕುರಿತು ಹೆಚ್ಚು ಚರ್ಚಿಸಲು ಭದ್ರತಾ ಮಂಡಳಿ ಇಂದು ತುರ್ತು ಸಭೆ ನಡೆಸಲಿದೆ.

*********

ಪ್ಯಾರಿಸ್‌ನಲ್ಲಿ ನಿನ್ನೆ ನಡೆದ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಯೂಕಿ ಬಮ್ರಿ ಮತ್ತು ರಾಮ್‌ಕುಮಾರ್ ರಾಮನಾಥನ್ ಸೋಲು ಕಂಡಿದ್ದಾರೆ.

ಕೆನಡಾದ 25ನೇ ಶ್ರೇಯಾಂಕಿತ ಪೀಟರ್ ಪೋಲಾನ್‌ಸ್ಕಿ ವಿರುದ್ಧ ಯೂಕಿ ಮೊದಲನೇ ಸುತ್ತಿನಲ್ಲೇ 6–7, 6–7ರಿಂದ ಸೋಲನ್ನಪ್ಪಿದರು.

ಅರ್ಜೆಂಟೈನಾದ ಗೈಡೊ ಪೆಲ್ಲಾ ವಿರುದ್ಧ ಮೊದಲನೇ ಸುತ್ತಿನಲ್ಲಿ ರಾಮ್‌ಕುಮಾರ್ 2–6, 1–6 ಹೀನಾಯ ಸೋಲು ಅನುಭವಿಸಿದರು.

ಯೂಕಿ ಹಾಗೂ ರಾಮ್‌ಕುಮಾರ್ ಇಬ್ಬರು ಸೋಲನ್ನಪ್ಪಿದ್ದು, ಭಾರತದಿಂದ ಸಿಂಗಲ್ಸ್‌ನಲ್ಲಿ ಗ್ರ್ಯಾಂಡ್ ಸ್ಲಾಮ್ ಪಂದ್ಯದಲ್ಲಿ ಯಾರು ಸ್ಪರ್ಧಿಸುತ್ತಿಲ್ಲ.

*********ಮುಕ್ತಾಯ*********